

# ಡೀಸೆಲ್, ಪೆಟ್ರೋಲ್ ವಾಹನಗಳಿಗೆ ವಿದಾಯದ ಗಳಿಗೆ ಸನ್ನಿಹಿತ ಆಗುತ್ತಿದೆಯೆ?



ಪ್ರಸ್ತುತ ರಸ್ತೆಗಳಲ್ಲಿ ವಿರಳವಾಗಿ ಕಾಣಸಿಗುವ ವಿದ್ಯುತ್ ಚಾಲಿತ ವಾಹನಗಳು ಮುಂದೊಂದು ದಿನ ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಲಿವೆಯೆ? ಡೀಸೆಲ್ ಮತ್ತು ಪೆಟ್ರೋಲ್‌ನಿಂದ ಚಲಿಸುವ ವಾಹನಗಳ ಜಾಗವನ್ನು ಇ–ವಾಹನಗಳು ಆಕ್ರಮಿಸಿಕೊಳ್ಳಲಿವೆಯೆ? ವಾಹನ ಜಗತ್ತಿನಲ್ಲಿನ ಹೊಸ ಬೆಳವಣಿಗೆಗಳನ್ನು ನೋಡಿದರೆ, 'ಎಲೆಕ್ಟ್ರಿಕ್ ವಾಹನ'ಗಳ ಶಕೆಯೊಂದು ಸದ್ಯದಲ್ಲೇ ಅನಾವರಣಗೊಳ್ಳುವ ಸಾಧ್ಯತೆಗಳು ನಿಚ್ಚಳವಾಗಿವೆ. ಈಗಾಗಲೇ ಕಾರು ಮತ್ತು ದ್ವಿಚಕ್ರ ವಾಹನಗಳನ್ನು ತಯಾರಿಸುವ ಕಂಪನಿಗಳಲ್ಲಿ ವಿದ್ಯುತ್ ಸಂಚಲನ ಉಂಟಾಗಿದೆ. ಭಾರತದಲ್ಲಿ ಕೂಡ ಇ–ವಾಹನಗಳ ಪೇಟೆಯಲ್ಲಿ ಹೊಸ ಉಮೇದು ಹಾಗೂ ಬಂಡವಾಳದ ಹರಿವು ಕಾಣಿಸಿಕೊಂಡಿದೆ. ಈ ವಿದ್ಯುತ್ ಸ್ಪರ್ಶದಿಂದಾಗಿ ವಾಹನ ಜಗತ್ತಿನಲ್ಲಿ ಉಂಟಾಗಬಹುದಾದ ಬದಲಾವಣೆಗಳು ಹಾಗೂ ಅದರಿಂದಾಗಿ ಜನಜೀವನ ಮತ್ತು ಪರಿಸರದ ಮೇಲೆ ಉಂಟಾಗಬಹುದಾದ ಪರಿಣಾಮಗಳ ವಿಶ್ಲೇಷಣೆ ಈ ವಾರದ 'ಸುಧಾ' ವಿಶೇಷ.

**■ ಜಯಸಿಂಹ ಆರ್.**